ರಂಗಮಂದಿರವನ್ನೇ ಕಟ್ಟಿಸಿ 'ವಸುಂಧರಾ ಭವನ' ಎಂದು ಹೆಸರಿಟ್ಟಿದ್ದಾಳೆ. ಕಲಾವಿದೆಯೊಬ್ಬರ ಹೆಸರಿನಲ್ಲಿ ಭವನವೊಂದನ್ನು ನಿರ್ಮಿಸಿದ್ದು ಇದೇ ಮೊದಲು. ಲಂಡನ್‌ನಲ್ಲಿ ಪ್ರತೀವರ್ಷ ಶಿಷ್ಯಂದಿರು 'ವಸುಂಧರಾ ಕಲಾ ಉತ್ಸವ' ಆಯೋಜಿಸುತ್ತಾರೆ. ಹುಬ್ಬಳ್ಳಿಯಲ್ಲಿ 'ನಿತ್ಯಸುಂದರ ವಸುಂಧರ' ಎಂಬ ಕಲಾ ಉತ್ಸವ ನಡೆಯುತ್ತದೆ. ಈ ಎಲ್ಲ ಶಿಷ್ಯಂದಿರು ತಾವು ಕಾರ್ಯಕ್ರಮಗಳನ್ನು ಆಯೋಜಿಸುತ್ತ ಎಲ್ಲ ಕಲಾವಿದರಿಗೆ ಅವಕಾಶಗಳನ್ನು ಕಲ್ಪಿಸುತ್ತಾರೆ. ಯಾವುದೇ ಶೈಲಿಯನ್ನು ಕಲಿಯುವ ಕಲಾವಿದರಾಗಲೀ, ಸಾಂಪ್ರದಾಯಿಕ ನೃತ್ಯ ಪದ್ಧತಿಯು ಬೆಳೆಯಬೇಕು ಎಂಬ ಆಶಯದಿಂದ ಕೆಲಸ ಮಾಡುತ್ತಿದ್ದಾರೆ. ತರಗತಿಗಳಲ್ಲಿ ನೃತ್ಯಾಭ್ಯಾಸ ಮಾಡುವುದು ಒಂದು ರೀತಿಯ ಪಾಠವಾದರೆ, ಇಂತಹ ಸಮಾಜಮುಖಿ ಚಿಂತನೆಗಳನ್ನು ಬೆಳೆಸುವುದು ಮತ್ತೊಂದು ರೀತಿಯ ಪಾಠ.

◆ **ಸುಮಾರು ಆರು ದಶಕಗಳ ಕಾಲ ನೀವು ಭರತನಾಟ್ಯ ತರಗತಿಗಳನ್ನು ನಡೆಸುತ್ತ ಬಂದವರು. ಅಂದಿನಿಂದ ಇಂದಿನವರೆಗೆ ಅನೇಕ ತಲೆಮಾರುಗಳು ನಿಮ್ಮ ಬಳಿ ನೃತ್ಯ ಕಲಿತಿದ್ದಾರೆ. ಈ ದೀರ್ಘ ಅವಧಿಯಲ್ಲಿ ನೀವು ಗಮನಿಸಿದ ಅಂಶಗಳೇನೇನು ಎಂದು ವಿವರಿಸಬಹುದಾ?**

ಹೌದು. ಮೊಬೈಲ್ ಕಾಲಕ್ಕಿಂತಲೂ ಮುನ್ನ ನಾನು ಭರತನಾಟ್ಯ ಕಲಿಸಿದ್ದೇನೆ. ಮೊಬೈಲ್ ಬಂದಮೇಲೆ ಹಾಗೂ ಆ್ಯಂಡ್ರಾಯಿಡ್ ಫೋನ್ ಬಂದ ಮೇಲೆಯೂ ನಾನು ತರಗತಿಗಳನ್ನು ನಡೆಸುತ್ತಿದ್ದೇನೆ. ಅಂದರೆ ಡಿಜಿಟಲ್ ಪೂರ್ವ ಮತ್ತು ಡಿಜಿಟಲ್ ನಂತರದ ಕಾಲಮಾನವನ್ನು ನಾನು ಕಂಡಿರುವೆ. ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಕಷ್ಟು ರೀತಿಯ ಬದಲಾವಣೆಗಳು ಆಗಿವೆ. ನಾನು ಗಮನಿಸಿದ ಪ್ರಕಾರ, ಈಗ ಬರವಣಿಗೆಯನ್ನು ಯಾರೂ ಇಷ್ಟಪಡುವುದಿಲ್ಲ. ಡಿಜಿಟಲ್ ಪೂರ್ವ ಕಾಲದಲ್ಲಿ ಮಕ್ಕಳು ಹಾಡು, ಸ್ವರಗಳು... ಕಥೆ, ವಿವರಗಳನ್ನೆಲ್ಲ ಬರೆದು ಕಲಿಯುತ್ತಿದ್ದರು. ತಮ್ಮ ಮಕ್ಕಳು ಹಾಗೆ ಶ್ರಮಪಟ್ಟು ಕಲಿಯುವುದನ್ನು ನೋಡಿದ ತಂದೆ ತಾಯಿ ಹೆಮ್ಮೆಪಡುತ್ತಿದ್ದರು. ಮಕ್ಕಳು ಕೇವಲ ಶಾಲೆಯಲ್ಲಿ ಅಂಕಗಳನ್ನಷ್ಟೇ ತೆಗೆಯಬೇಕು ಎಂಬ ಇರಾದೆ ಹಿಂದೆ ಇರಲಿಲ್ಲ. ಅವರು ತಮಗೆ ಇಷ್ಟವಾದುದನ್ನೆಲ್ಲ



ಮಾಡುತ್ತಿರಲಿ. ಒಟ್ಟಿನಲ್ಲಿ ಬಾಲ್ಯದಲ್ಲಿ ಏನಾದರೊಂದು ವಿಚಾರ ಕಲಿಯುತ್ತಿರಲಿ. ಸಮಯ ವ್ಯರ್ಥ ಆಗದೇ ಇರಲಿ ಎಂದಷ್ಟೇ ಪೋಷಕರು ಭಾವಿಸುತ್ತಿದ್ದರು. ಹಾಗೆ ನೋಡಿದರೆ ಹಿಂದಿನ ಕಾಲದ ಮಕ್ಕಳು ಎಷ್ಟೊಂದು ಸ್ವತಂತ್ರರಾಗಿದ್ದರು ಎನಿಸುತ್ತದೆ. ಆದರೆ ಯಾವಾಗ ಟ್ಯೂಷನ್ ಎಂಬುದು ಆರಂಭವಾಯಿತೋ, ಅದರಿಂದ ಮಕ್ಕಳ ಸ್ವಾತಂತ್ರ್ಯವೇ ಹರಣವಾಯಿತು. ಅವರು ತರಗತಿಯಲ್ಲಿ ಅಂಕ ಗಳಿಸಲೇಬೇಕು ಎಂಬ ಒತ್ತಡ, ಪದವಿ ಕಲಿತ ಕೂಡಲೇ ಏನಾದರೂ ಕೆಲಸ ಮಾಡಲೇಬೇಕು, ಇಲ್ಲವಾದಲ್ಲಿ ಅವನ ಜೀವನವೇ ವ್ಯರ್ಥ ಎಂಬ ಭಾವನೆ ಇಂದಿನ ಕಾಲದ ಮಕ್ಕಳ